ಓ.ಎಸ್ ನಂಃ 46/2016
ಡಿಡಬ್ಲ್ಯೂಃ 3
ದಿನಾಂಕಃ 24.10.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ಶ್ರೀ ಪಿ ಎನ್ ಕೆ ವಕೀಲರಿಂದಃ

ದಾವಾ ಐಟಂ ನಂಬರ್ 13 ನನ್ನ ಮಗಳ ಮದುವೆಗೆ ಬಿಟ್ಟಂತಹ ಆಸ್ತಿ ಎಂದರೆ ಸರಿ. ಸದರಿ ಜಮೀನು ಇನ್ನೂ ಮಾರಾಟವಾಗಿಲ್ಲ ಎಂದರೆ ಯಾವ ಸ್ವತ್ತು ಮಾರಾಟವಾಗಿಲ್ಲ ಎನ್ನುತ್ತಾರೆ. ರೂಪಾರವರ ಮದುವೆಯನ್ನು ಅವಟ ಇಬ್ಬರು ಅಣ್ಣಂದಿರು ಮಾಡಿದರಿಂದ ದಾವಾ ಐಟಂ ನಂಬರ್ 13 ನ್ನು ಮಾರಾಟ ಮಾಡಿಲ್ಲ ಎಂದರೆ ರೂಪಾರವರ ಮದುವೆಯನ್ನು ನಾನು ಮಾಡಿರುತ್ತೇನೆ ಎನ್ನುತ್ತಾರೆ. ಐಟಂ ನಂಬರ್ 13 ನ್ನು ವಿಭಾಗ ಪತ್ರದಲ್ಲಿ ಸೇರಿಸಿರುವುದರಿಂದ ನನಗೆ ಮತ್ತು ನನ್ನ ಇಬ್ಬರು ಮಕ್ಕಳಿಗೆ ಬಿಟ್ಟು ಬೇರೆಯವರಿಗೆ ಸದರಿ ಸ್ವತ್ತಿನಲ್ಲಿ ಯಾವುದೇ ಭಾಗವಿಲ್ಲ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಉಳಿದ ಪ್ರತಿವಾದಿಗಳು ತಮ್ಮ ಪ್ರತಿವಾದ ಪತ್ರದಲ್ಲಿ ಏನೆಲ್ಲಾ ತಕರಾರು ಸಲ್ಲಿಸಿರುತ್ತಾರೆ ಎಂದು ನಾನು ಖುದ್ದಾಗಿ ಅಥವಾ ನನ್ನ ವಕೀಲರ ತಿಳಿದುಕೊಂಡಿರುತ್ತೇನೆಯೇ ಅಂದರೆ ಇಲ್ಲ ಎನ್ನುತ್ತಾರೆ. ನಿಪಿ 1 ಮತ್ತು 2 ನ್ನು ಪಡೆಯಲು ನನ್ನ ಹೆಸರಿನಲ್ಲಿ ಅರ್ಜಿ ಸಲ್ಲಿಸಿ ವಂಶವೃಕ್ಷ ಪಡೆದಿರುತ್ತಾರೆ ಎಂದರೆ ಸರಿ . ಸದರಿ ದಾಖಲೆಗಳನ್ನು ನನ್ನಿಂದ ಪಡೆದು ವಾದಿಗಳು ಮತ್ತು 1 , 3 ಮತ್ತು 4 ಪ್ರತಿವಾದಿಗಳು ಈ ಸುಳ್ಳು ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ವಿಭಾಗ ಪತ್ರ 2003 ರಲ್ಲಿ ಮಾಡಿಕೊಂಡಾಗ ನಮ್ಮ ಕುಟುಂಬದಲ್ಲಿ ಹೆಣ್ಣು ಮಕ್ಕಳು ಇರುವ ಬಗ್ಗೆ ಮಾಹಿತಿ ಇತ್ತು . ಈ ದಾವೆ ಹೂಡುವ ಪೂರ್ವದಲ್ಲಿ ನಮ್ಮ ಹೆಣ್ಣು ಮಕ್ಕಳು ನನಗೆ ಲಿಖಿತ ನೋಟೀಸನ್ನು ನೀಡಿರುತ್ತಾರೆ ಎಂದರೆ ಇಲ್ಲ ಎನ್ನುತ್ತಾರೆ .

ಬೇತಮಂಗಲದಲ್ಲಿ ಇರುವ ದಾವಾ ಐಟಂ ನಂಬರ್ 21 ನನ್ನ ಹೆಸರಿಗೆ ಇದೆ ಎಂದರೆ ಸರಿ . ಸಾಕ್ಷಿ ಮುಂದುವರೆದು ಐಟಂ ನಂಬರ್ 22 ನ್ನು ಎರಡನೇ ಪ್ರತಿವಾದಿ ಮಾರಿಕೊಂಡಿದ್ದಾರೆ ಎನ್ನುತ್ತಾರೆ. ದಾವಾ ಐಟಂ ನಂಬರ್ 21 ಈಗ ನನ್ನ ಹೆಸರಿನಲ್ಲಿಯೇ ಇದೆಯಾ ಅಂದರೆ ಮದುವೆ ಖರ್ಚಿಗೆ ಸದರಿ ಸ್ವತ್ತನ್ನು ಮಾರಾಟ ಮಾಡಿರುತ್ತೇನೆ ಎನ್ನುತ್ತಾರೆ. ಸಾಕ್ಷಿ ನಂತರ ಮಾರಾಟ ಮಾಡಿಲ್ಲ ಎನ್ನುತ್ತಾರೆ. ಹಾಗಾದರೆ ಸದರಿ ಸ್ವತ್ತನ್ನು ಏನು ಮಾಡಿರುತ್ತೀರೀ ಎಂದರೆ ರೂಪಾರವರಿಗೆ ದಾನ ಮಾಡಿರುತ್ತೇನೆ ಎನ್ನುತ್ತಾರೆ. ಯಾವ ವರ್ಷದಲ್ಲಿ ದಾನ ಮಾಡಿರುತ್ತೇನೆ ಎಂದರೆ ನೆನಪಿಲ್ಲ ಎನ್ನುತ್ತಾರೆ. ಸದರಿ ದಾನ ಪತ್ರದಲ್ಲಿ ಮಗಳ ಮದುವೆ ಖರ್ಚಿಗಾಗಿ ಸದರಿ ಸ್ವತ್ತನ್ನು ದಾನ ಮಾಡುತ್ತಿದ್ದೇನೆ ಎಂದು

ಬರೆಸಿರುತ್ತೇನೆಯೇ ಅಂದರೆ ಇಲ್ಲ ಎನ್ನುತ್ತಾರೆ. ದಾನ ಪತ್ರದಲ್ಲಿ ಇರುವ ವಿಚಾರ ನನಗೆ ತಿಳಿದಿದೆಯಾ ಅಂದರೆ ಗೊತ್ತು ಎನ್ನುತ್ತಾರೆ. ದಾವಾ ಐಟಂ ನಂಬರ್ 21 ರಲ್ಲಿ ಎಲ್ಲರಿಗೂ ಸಮಾನ ಭಾಗ ಇದೆ ಎಂದರೆ ಸರಿ . ಐಟಂ ನಂಬರ್ 18 ಮತ್ತು 19 ನೇ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಎಲ್ಲಾ ದಾವಾ ಸ್ವತ್ತುಗಳು ಒಟ್ಟು ಕುಟುಂಬದ ಆಸ್ತಿಗಳು ಎನ್ನುತ್ತಾರೆ. ಐಟಂ ನಂಬರ್ 18 ರಿಂದ 21 ಸ್ವತ್ತುಗಳನ್ನು ವಿಭಾಗ ಪತ್ರದಲ್ಲಿ ಸೇರಿಸಲು ತೊಂದರೆ ಇರಲಿಲ್ಲ ಎಂದರೆ ಸರಿ . 2003 ರಲ್ಲಿ ವಿಭಾಗ ಆದ ನಂತರ ತಮ್ಮ ತಮ್ಮ ಭಾಗಕ್ಕೆ ಬಂದ ಸ್ವತ್ತುಗಳಲ್ಲಿ ಪ್ರತ್ಯೇಕವಾಗಿ ಪಾಲುದಾರರು ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಇಲ್ಲ ಒಟ್ಟಾಗಿ ಇರುತ್ತಾರೆ ಎನ್ನುತ್ತಾರೆ. ಐಟಂ ನಂಬರ್ 17 ರಲ್ಲಿ ನನ್ನ ಮೊದಲನೇ ಮಗ ಸಮಾಧಿ ಇದೆ ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಅದರಲ್ಲಿ ಕೃಷಿ ಹೊಂಡಾ ಸಹ ಇದೆ ಎಂದರೆ ಗೊತ್ತಿಲ್ಲ ಎನ್ನುತ್ತಾರೆ. ನಿಪಿ 53 ರಲ್ಲಿ ಇರುವುದು ನನ್ನ ಮಗನ ಸಮಾಧಿ ಎಂದರೆ ಸರಿ . ನಿಪಿ 52 ರಲ್ಲಿ ಕೃಷಿ ಹೊಂಡಾ ಇದೆ ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ದಾವಾ ಐಟಂ ನಂಬರ್ 1 ರಿಂದ 17 ರಲ್ಲಿ ಯಾರಿಗೂ ಹಕ್ಕಿಲ್ಲ ನಿಪಿ 3 ರಂತೆ ಯಾರಿಗೆಲ್ಲಾ ಭಾಗ ಇದೆಯೋ ಅವರಿಗೆ ಮಾತ್ರ ಭಾಗ ಇದೆ ಎಂದರೆ ಸರಿಯಲ್ಲ . ದಾವಾ ಐಟಂ ನಂಬರ್ 18 ರಿಂದ 21 ರಲ್ಲಿ ಎಲ್ಲರಿಗೂ ಭಾಗ ಇದೆ ಎಂದರೆ ಸರಿ .

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

(ರಹೀಮ್ ಅಲಿ ಎಮ್ ನದಾಫ್ )
ಅಪರ ಹಿರಿಯ ಸಿ.ಜೆ ಮತ್ತು ಜೆಎಂಎಫ್ ಸಿ
ಕೆಜಿಎಫ್